ವುದರಿಂದ ನಾವು ಚುನಾವಣೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ಆದಷ್ಟು ಬೇಗ ಅಂದರೆ ಈ ವರ್ಷದ ಕೊನೆಯೊಳಗಾಗಿ ಚುನಾವಣೆಯನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ. ಇಷ್ಟರಲ್ಲೇ ಇದಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿ ಮಸೂದೆ ತಮ್ಮ ಮುಂದೆ ಬರುತ್ತದೆ, ಅದನ್ನು ಆದಷ್ಟು ಬೇಗ ವಾಪಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪೆಚ್. ಗಂಗಾಧರನ್.—ಕಾರ್ಪೊರೇಷನ್ ವ್ಯಾಪ್ತಿಗೆ ಕೇವಲ ಪಶ್ಚಿಮದ ಕಡೆಯಲ್ಲಿರುವ ಗ್ರಾಮಗಳನ್ನು ಸೇರಿಸಿಕೊಳ್ಳುವುದಾಗಿ ತಿಳಿದುಬಂದಿವೆ. ಆದರೆ ಮೈಸೂರು ನಗರದ ನಾಲ್ಕೂ ಭಾಗ ಗಳಲ್ಲಿರತಕ್ಕ ಗ್ರಾಮಗಳನ್ನು ಸೇರಿಸಿಕೊಳ್ಳುವುದರಲ್ಲಿ ನಿಮಗಾಗುವ ತೊಂದರೆಯಾದರೂ ಏನು ಎಂದು ತಮ್ಮನ್ನು ಕೇಳಬಯಸುತ್ತೇನೆ. ಅಥವಾ ಒಂದು ವೇಳೆ ಆ ಗ್ರಾಮಗಳನ್ನು ನಗರಸಭೆಯ ವ್ಯಾಪ್ತಿ ಯೊಳಗೆ ಸೇರಿಸಿಕೊಂಡಿದ್ದರೆ ಯಾವಾಗ ಸೇರಿಸಿಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಈ ಬಗ್ಗೆ ಇನ್ನೂ ಒಂದು ನಿರ್ದಿಷ್ಟವಾದ ಅಂತಿಮ ತೀರ್ಮಾನ ಬಂದಿಲ್ಲ. ಒಂದು ವೇಳೆ ತಮ್ಮ ಸಲಹೆಗಳೇನಾದರೂ ಇದ್ದರೆ ಅದನ್ನು ಕಳುಹಿಸಿಕೊಟ್ಟರೆ ಅದು ಫೀಸ್ ಬಿಲ್ ಎಂದು ತಿಳಿದು ಬಂದಲ್ಲಿ ಖಂಡಿತ ಸೇರಿಸುತ್ತೇವೆ.

ಶ್ರೀ ಪೆಚ್. ಗಂಗಾಧರನ್.—ಬೈ ಎಲೆಕ್ಷನ್ ಇದೆ ಅದು ಮುಗಿಯಲಿ ಎಂದು ಸುಮ್ಮನಿದ್ದೀರೋ ಅಥವಾ ಬೇರೆ ಇನ್ನೇನಾದರೂ ಉದ್ದೇಶ ಇಟ್ಟುಕೊಂಡಿದ್ದೀರೋ ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅಂಥ ಉದ್ದೇಶ ಏನೂ ಇಲ್ಲ. ಈಗ ಮೊದಲು ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಮೈಸೂರು ಮತ್ತು ಮಂಗಳೂರು ನಗರಸಭೆಗಳಿಗೆ ಸಂಬಂಧಿಸಿದ ಕಾರ್ಪೊರೇಷನ್ ಆಕ್ಟ್ ತಿದ್ದುಪಡಿ ಮಾಡಿ ನಂತರ ಚುನಾವಣೆಗಳನ್ನು ಮಾಡುತ್ತೇವೆ.

Levy of interest on Takkavi and Land Development Loans

315. Sri D. T. Mayanna (Huliyurdurga).—Will the Minister for Revenue be pleased to state :—

(*a*) the rate at which the simple and penal interest would be levied by the Government for the loans of the Land Development Banks and Takkavi loans;

(*b*) whether the Government would change its policy of levying intereset on these loans as it affects the ryots ?

Sri B. Basavalingappa (Minister for Revenue).—(*a*) Simple interest at the rate of 11% and penal interest at the rate of 12½% is being levied for the loans of the Land Development Banks. The Government is levying simple interest at the rate of 8½% and penal interest at the rate of 12½% for the Takkavi loans, as per the provisions of the Karnataka Agriculturists loans Rules, 1966 and the Karnataka Land Improvement Loans Rules, 1966.

(*b*) It has not come to the notice of the Government that the ryots are affected on account of the policy of levying interest. Hence, the question of changing the said policy does not arise.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ "ಭೂ ಅಭಿವೃದ್ಧಿ ಬ್ಯಾಂಕಿನ ಸಾಲಗಳಿಗೆ ಸರಳ ಬಡ್ಡಿಯನ್ನು ಶೇಕಡ ೧೧ ರಂತೆ ಮತ್ತು ಸುಸ್ತಿ ಬಡ್ಡಿಯೂ ಸೇರಿದಂತೆ ಶೇಕಡ ಹನ್ನೆರಡೂವರೆ ದರದಲ್ಲಿ ವಿಧಿಸಲಾಗುತ್ತದೆ. ಕರ್ನಾಟಕ ಅಗ್ರಿಕಲ್ಚರಿಸ್ಟ್ ಲೋನ್ಸ್ ರೂಲ್ಸ್ ೧೯೬೬ ಮತ್ತು ಕರ್ನಾಟಕ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೂಲ್ಸ್ ೧೯೬೬ರ ಪ್ರಕಾರ

ಸರ್ಕಾರವು ತಕಾವಿ ಸಾಲಗಳಿಗೆ ಸರಳಬಡ್ಡಿ ಶೇಕಡ ಎಂಟೂವರೆ ಮತ್ತು ಸುಸ್ತಿಬಡ್ಡಿಯೂ ಸೇರಿದಂತೆ ಶೇಕಡ ಹನ್ನೆರಡೂವರೆ ದರದಲ್ಲಿ ವಿಧಿಸುತ್ತದೆ'' ಎಂದು ಹೇಳಿದ್ದೀರಿ. ಈ ಬ್ಯಾಂಕ್‌ಗಳಲ್ಲಿ ಸಾಲ ತೆಗೆದು ಕೊಳ್ಳುವವರು ಎಂದರೆ ಬರೀ ಬಡವರು ಮತ್ತು ಸಣ್ಣ ಹಿಡುವಳಿದಾರರು. ಅವರು ತೆಗೆದುಕೊಂಡ ಸಾಲಕ್ಕೆ ಬಡ್ಡಿ ಕಟ್ಟಲು ಸಾಧ್ಯವಾಗದೇ ತಮ್ಮ ಜಮೀನನ್ನೇ ಮಾರಿಕೊಂಡು ಹೋಗಬೇಕಾದ ಪರಿಸ್ಥಿತಿ ಬಂದಿರುವುದರಿಂದ ಸರ್ಕಾರದವರು ತಮ್ಮ ನೀತಿಯನ್ನು ಬದಲಾವಣೆ ಮಾಡಿಕೊಂಡು ಸರಳಬಡ್ಡಿ ದರದಲ್ಲೇ ಸಾಲದ ವಸೂಲಾತಿಯಲ್ಲಿ ಏನಾದರೂ ರಿಯಾಯಿತಿ ತೋರಿಸುವುದಕ್ಕೆ ಪ್ರಯತ್ನ ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅವರ ಮೇಲೆ ಸುಸ್ತಿ ಬಡ್ಡಿಯನ್ನು ಮಾತ್ರ ಹಾಕಬೇಡಿ.

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಕಳಕಳಿ ಏನು ಎಂಬುದು ನನಗೂ ಅರ್ಥವಾಗು ತ್ತದೆ. ಆದರೆ ಇಲ್ಲಿ ಏನಾಗುತ್ತದೆ ಎಂದರೆ ರೈತರು ಸಾಲ ತೆಗೆದುಕೊಳ್ಳುತ್ತಾರೆ, ಮತ್ತೆ ವಾಪಸ್ಸು ಕಟ್ಟುವುದಿಲ್ಲ. ಆಗ ನಾವು ಸುಸ್ತಿಬಡ್ಡಿಯನ್ನು ಹಾಕಲೇಬೇಕಾಗುತ್ತದೆ. ಆದರೂ ತಮ್ಮ ಸಲಹೆಯನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ನಿಮ್ಮ ಬ್ಯಾಂಕ್ ಅಧಿಕಾರಿಗಳು ಸಾಲದ ವಸೂಲಾತಿಗಾಗಿ ಜೀಪ್ ತೆಗೆದುಕೊಂಡು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಸುಮಾರು ೫೦ ಮನೆಗಳಿಗೆ ಹೋಗುತ್ತಾರೆ. ಆದರೆ ಅಲ್ಲಿಗೆ ಹೋಗಿದ್ದಕ್ಕೆ ೨೫ ರೂಪಾಯಿಯಂತೆ ಪ್ರತಿಯೊಂದು ಮನೆಗೂ ಛಾರ್ಜ್ ಮಾಡುತ್ತಾರೆ. ಆದುದರಿಂದ ಈ ನೀತಿಯನ್ನು ಬದಲಾವಣೆ ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅಧಿಕಾರಿಗಳು ತಮ್ಮ ಕೆಲಸವನ್ನು ಮಾಡುತ್ತಾರೆ. ಅವರು ತೆಗೆದು ಕೊಂಡ ಸಾಲವನ್ನು ವಾಪಸ್ಸು ಕೊಟ್ಟರೆ ಈ ಅಧಿಕಾರಿಗಳು ಅವರ ಮೇಲೆ ಏತಕ್ಕೆ ಛಾರ್ಜ್ ಮಾಡುತ್ತಾರೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಸುಸ್ತಿ ಬಡ್ಡಿ ಜೊತೆಗೆ ರಿಕವರಿ ಮಾಡುವುದಕ್ಕೆ ಹೋಗಿ ಬರುವ ಖರ್ಚನ್ನು ಸೇರಿಸಿ ಅಧಿಕಾರಿಗಳು ಹಣವನ್ನು ವಸೂಲು ಮಾಡುವುದ ರಿಂದ ರೈತರಿಗೆ ತೊಂದರೆಯಾಗಿರುವುದು ನಿಜವಲ್ಲವೇ ? ಕೆಲವು ಕಡೆ ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಇದ್ದು, ಅಂಥ ಕಡೆಗಳಲ್ಲಿಯೂ ಇದನ್ನು ರೈತರಿಂದ ವಸೂಲು ಮಾಡುತ್ತಿರುವುದು ಸರಿಯೇ ?

ಶ್ರೀ ಬಿ. ಬಸವಲಿಂಗಪ್ಪ.—ಅಭಾವ ಪರಿಸ್ಥಿತಿ ಪ್ರಶ್ನೆಯೇ ಬೇರೆ. ಅಲ್ಲಿಗೆ ಬೇರೆ ನೀತಿ ಇದೆ. ಆವರಿಗೆ ಸಾಲವನ್ನು ವಸೂಲು ಮಾಡುವುದನ್ನು ಮುಂದೂಡುತ್ತೇವೆ. ಮತ್ತು ಸುಸ್ತಿ ಬಡ್ಡಿಯನ್ನು ಬಿಡುವುದನ್ನೂ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ವೇಸಾಮಾನ್ಯವಾಗಿ ಎಲ್ಲರಿಗೂ ಕೂಡ ತೊಂದರೆ ಆಗಿದ್ದರೆ ಅದನ್ನು ಪಜಾ ಮಾಡಬೇಕು ಎಂದು ಕೇಳಿದರೆ ಹೇಗೆ ? ಚಾಪ್ತಿ ಪಣವನ್ನು ಅಧಿಕಾರಿಗಳು ವಸೂಲು ಮಾಡಿದ್ದಾರೆಂದು ಹೇಳುವುದು ಸರಿಯಲ್ಲ.

ಶ್ರೀ ಡಿ. ಟಿ. ಮಾಯಣ್ಣ.—ಈಗ ಕೆಲವು ಕಡೆಗಳಲ್ಲಿ ಸುಸ್ತಿ ಬಡ್ಡಿಯನ್ನು ಅಧಿಕಾರಿಗಳು ಕ್ಯಾನ್ಸಲ್ ಮಾಡಿ, ಸರಳಬಡ್ಡಿಯನ್ನು ಮಾತ್ರ ವಸೂಲು ಮಾಡುತ್ತಿದ್ದಾರೆ. ಇಂಥ ನೀತಿಯನ್ನು ಮುಂದೂ ಕೂಡ ತಾವು ಫಾಲೋ ಮಾಡಿಕೊಂಡು ಬರುತ್ತೀರಾ ? ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ವಸೂಲು ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸುಸ್ತಿ ಬಡ್ಡಿ ವಿಚಾರದಲ್ಲಿ ನಾವು ರೂಲ್ಸ್ ಪ್ರಕಾರ ವಸೂಲು ಮಾಡು ತ್ತಿದ್ದೇವೆ. ಎಲ್ಲೆಲ್ಲಿ ಅವಶ್ಯಕತೆ ಬೀಳುತ್ತದೆ, ಅಲ್ಲಲ್ಲಿ ಸ್ವಲ್ಪ ರಿಯಾಯಿತಿಯನ್ನು ತೋರಿಸಬಹುದು. ಇಂಥ ರಿಯಾಯಿತಿಯನ್ನು ತೋರಿಸಲಿಕ್ಕೆ ನಾವು ಯಾವತ್ತೂ ಸಿದ್ಧರಿದ್ದೇವೆ.

ಶ್ರೀ ಜಿ. ಬಿ. ಶಂಕರರಾವ್.—ಸುಸ್ತಿ ಬಡ್ಡಿ ಮತ್ತು ಸರಳಬಡ್ಡಿ ಮತ್ತು ಅದಕ್ಕೆ ವಸೂಲು ಮಾಡ ಬೇಕಾದ ತಗುಲುವ ಖರ್ಚನ್ನು ಸೇರಿಸಿ ಅಧಿಕಾರಿಗಳು ವಸೂಲು ಮಾಡುತ್ತಿದ್ದಾರೆಂದು ನಾವು ಸಿದ್ಧ ಮಾಡಿಕೊಟ್ಟರೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ರೂಲ್ಸ್ ಪ್ರಕಾರ ನಾವು ಕೊಟ್ಟಿರತಕ್ಕ ಸಾಲವನ್ನು ವಸೂಲು ಮಾಡು ತ್ತಿದ್ದೇವೆ. ರೂಲ್ಸ್ ಬಿಟ್ಟು ಬಿಟ್ಟು ಆದಕ್ಕೆ ವಿರುದ್ಧವಾಗಿ. ದಾರಿ ಬಿಟ್ಟು ಯಾರಾದರೂ ವರ್ತನೆ ಮಾಡಿದರೆ ದಯವಿಟ್ಟು ನಮಗೆ ತಿಳಿಸಿ ನಾವು ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.